OS No. 76/2021

PW-1

**(ಇಂದು ದಿಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.RM ವಕೀಲರಿಂದಃ-**

ಶರಣಮ್ಮ ಗಂಡ ಈರಪ್ಪ ನನ್ನ ಅಜ್ಜಿ ಅಂದರೆ ನನ್ನ ತಾಯಿಯ ತಾಯಿ. ಶರಣಮ್ಮ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ಮೂಲತಹ ಶರಣಮ್ಮ ರವರಿಗೆ ಸೇರಿದ್ದವು ಎಂದರೆ ಸರಿ.ಶರಣಮ್ಮ ರವರಿಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂಂದರೆ ಸಿದ್ದಮ್ಮ ಮತ್ತು ನಾಗಮ್ಮ . ಸಿದ್ದಮ್ಮ ಎಂದರೆ 1 ನೇ ಪ್ರತಿವಾದಿ. 1 ನೇ ಪ್ರತಿವಾದಿಯ ಮಗಳು 8 ನೇ ಪ್ರತಿವಾದಿ. 1 ನೇ ಪ್ರತಿವಾದಿಗೆ ಕಣ್ಣು ಕಾಣುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಸಿದ್ದಮ್ಮ ಮತ್ತು ನಾಗಮ್ಮ ರವರಿಗೆ ತಲಾ ಅರ್ದ ಭಾಗ ಬರುತ್ತದೆ ಎಂದರೆ ಸರಿ. ಸಿದ್ದ ಮ್ಮ ಮತ್ತು ನಾಗಮ್ಮ ರವರಿಗೆ ತಲಾ ಅರ್ದ ಭಾಗ ಆದರೆ ನನಗೆ ತಕರಾರು ಇಲ್ಲ, ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮಗೆ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿ. ನಾಗಮ್ಮನಿಗೆ ನಾಗರಾಜ ಎಂಬ ಮಗನಿದ್ದ ಎಂದರೆ ಸರಿ. ನಾಗಮ್ಮ ತೀರಿ ಹೋಗಿದ್ದಾಳೆ. ನಾಗರಾಜ ಕೂಡ ತೀರಿ ಹೋಗಿದ್ದಾರೆ . ನಾಗರಾಜನಿಗೆ ಇಬ್ಬರು ಗಂಡು ಮಕ್ಕಳು , ಒಬ್ಬ ಳು ಹೆಣ್ಣು ಮಗಳು ಎಂದರೆ ಸರಿ. ನಾಗರಾಜ ಮಕ್ಕಳ ಹೆಸರು ಸುನೀಲ್ ಮತ್ತು ಮಲ್ಲಿಕಾರ್ಜುನ್ ಎಂದರೆ ಸರಿ. ಮಗಳು ಪಾರ್ವತಿ ಎಂದರೆ ಸರಿ. ಆ 3 ಜನರನ್ನು ಈ ದಾವೆಯಲ್ಲಿ ವಾದಿಯರು ಸೇರಿಸಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ಕಣ್ಣು ಕಾಣುವುದಿಲ್ಲ ಕಾರಣ ಅವಳಿಗೆ ತೊಂದರೆ ಕೋಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ನಾಗಮ್ಮನಿಗೆ ಅರ್ದ ಭಾಗ ಬಿಟ್ಟು ತನ್ನ ಭಾಗಕ್ಕೆ ಅರ್ದ ಭಾಗ ಪಡೆದುಕೊಳ್ಳಲು ಸಿದ್ದರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

(7 , 9 , 10 , 12 ನೇ ಪ್ರತಿವಾದಿಯರ ಪರ ಶ್ರೀ BGP ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**